**ಸಾಕ್ಷಿಗೆ ದಿನಾಂಕಃ 18-03-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎನ್.ಆರ್ ವಕೀಲರಿಂದಃ**

ಈ ದಾವೆಗೆ ಪೂರಕವಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.–1 | ಪಹಣಿ |
| ನಿ.ಪಿ.–2 ಮತ್ತು 3 | ಮ್ಯೂಟೇಷನ್ ಗಳು |
| ನಿ.ಪಿ.–4 | ಋಣಭಾರ ಪ್ರಮಾಣ ಪತ್ರ (2 ಪುಟಗಳು) |
| ನಿ.ಪಿ.–5 | ಗ್ರಾಮ ನಕಾಶೆ |
| ನಿ.ಪಿ.–6 | ಆಕಾರ್ ಬಂದ್ ಉತ್ತಾರು |
| ನಿ.ಪಿ.–7 ರಿಂದ 9 | ಕಂದಾಯ ಪಾವತಿ ರಶೀದಿಗಳು |

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಾನು ಹಾಜರುಪಡಿಸಿದ ದಾಖಲೆಗಳನ್ನು ಪರಿಗಣಿಸಿ ಸದರಿ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**